# DEPARTMENT OF HUMANITIES (KANNADA)

## Report on Kannada Habba 2015

**Activity title: ಕನ್ನಡ ಹಬ್ಬ ವರದಿ**

**ಸ್ಥಳ: ಮುಖ್ಯ ಸಭಾಂಗಣ, ಕ್ರಿಸ್ತು ಜಯಂತಿ ಕಾಲೇಜು, ಬೆಂಗಳೂರು**

**ದಿನಾ0ಕ: ೧೮-೧-೨೦೧೩ ಬುಧವಾರ ಸಮಯ: ಮಧ್ಯಾಹ್ನ ೨.೦೦ ರಿಂದ ೫.೦೦ ಗಂಟೆ**

**Objective**:ಕ್ರಿಸ್ತು ಜಯಂತಿ ಕಾಲೇಜು, ಕನ್ನಡ ವಿಭಾಗದಲ್ಲಿ ದಿನಾಂಕ ೧೬ ಡಿಸೆಂಬರ್ ೨೦೧೫ ರಂದು ಕನ್ನಡ ಹಬ್ಬ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಈ ವರ್ಷವೂ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ.ಎಚ್.ಎಸ್. ಸತ್ಯನಾರಾಯಣ ಉಪನ್ಯಾಸಕರು, ಪದವಿ ಪೂರ್ವ ಕಾಲೇಜು, ಬಸವನಗುಡಿ, ಬೆಂಗಳೂರು. ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ರೆ. ಫಾ. ಜೋಸ್ ಕುಟ್ಟಿಯವರು ವಹಿಸಿಕೊಂಡಿದ್ದರು. ವೇದಿಕೆಯಲ್ಲಿ ಕಾಲೇಜಿನ ಹಣಕಾಸು ಅಧಿಕಾರಿಗಳಾದ ರೆ.ಫಾ. ಲಿಜೋ ಪಿ ಥಾಮಸ್‌ರವರು ಹಾಗೂ ವಿಭಾಗದ ಮುಖ್ಯಸ್ಥರಾದ ಶ್ರೀ ಸರ್ವೇಶ್ ಬಿ.ಎಸ್. ಅವರು ಮತ್ತು ವಿದ್ಯಾರ್ಥಿ ಮುಖಂಡರಾದ ಹೇಮಂತ ಕುಮಾರ್ ಮತ್ತು ಸುಜಿತಾ ಸ್ಟಾನ್ಲಿ ಉಪಸ್ಥಿತರಿದ್ದರು.

Activity detail:: ಕಾರ್ಯಕ್ರಮ ಬಿಬಿಎಂ ವಿದ್ಯಾರ್ಥಿನಿ ಪ್ರಿಯಾಬಾಯಿ ಅವರ ಪ್ರಾರ್ಥನಾ ಗೀತೆಯೊಂದಿಗೆ ಆರಂಭವಾಯಿತು. ಈ ಕನ್ನಡ ಹಬ್ಬಕ್ಕೆ ಎಲ್ಲರನ್ನೂ ಸ್ವಾಗತಿಸಿದವರು ವಿಭಾಗದ ಉಪನ್ಯಾಸಕರಾದ ಶ್ರೀ ನಾರಾಯಣಸ್ವಾಮಿ. ಎಂ ರವರು. ಪ್ರಾಸ್ತಾವಿಕ ಭಾಷಣ ಮಾಡಿದ ರೆ,ಫಾ. ಜೋಸ್ ಕುಟ್ಟಿಯವರು ಕನ್ನಡ ಭಾಷೆಗೆ ಕೊಡುಗೆ ನೀಡಿದ ಕುವೆಂಪು, ಬೇಂದ್ರೆ ಮತ್ತು ಕಾರಂತ

ಮುಂತಾದ ಮಹನೀಯರನ್ನು ನೆನೆದರು. ಹಾಗೆ ಮಾತ್ರ ಭಾಷೆಯನ್ನು ಬಳಸಿ ಬೆಳಸಬೇಕು ಎಂದರು. ವಿದ್ಯಾರ್ಥಿಗಳು ಜವಾಬ್ದಾರಿಯಿಂದ ವರ್ತಿಸಿ ತಮ್ಮ ಗುರಿಗಳನ್ನು ಸಾಧಿಸಬೇಕೆಂದು ಕರೆ ಕೊಟ್ಟರು. ನಂತರ ಮುಖ್ಯ ಅತಿಥಿಗಳ ಭಾಷಣ ಮಾಡಿದ ಡಾ.ಎಚ್.ಎಸ್. ಸತ್ಯನಾರಾಯಣ ಅವರು ತಮ್ಮ ಭಾಷಣದಲ್ಲಿ ಕನ್ನಡಭಾಷೆ ಎದುರಿಸುತ್ತಿರುವ ಸವಾಲುಗಳನ್ನು ತಿಳಿಸಿದರು. ಕನ್ನಡ ಭಾಷೆ ಶಿಕ್ಷಣದಲ್ಲಿ ಹೆಚ್ಚು ಸ್ಥಾನ ಪಡೆಯದಿರಲು ಕಾರಣ ನಮ್ಮ ವ್ಯವಸ್ಥೆ ಎಂದರು. ಕನ್ನಡ ಭಾಷೆಗೆ ಮಿಷನರಿಗಳ ಕೊಡುಗೆಯನ್ನು ಸ್ಮರಿಸಿದರು. ಕಿಟೆಲ್ ತಯಾರಿಸಿದ ಕನ್ನಡ ನಿಘಂಟು ಅನೇಕ ಭಾಷೆಗಳಿಗೆ ಸೇತುಬಂಧ ಆಯಿತು ಎಂದರು. ಕನ್ನಡವನ್ನು ಅಭಿಮಾನದಿಂದ ಮಾತ್ರ ನೊಡದೆ ಅದು ಬಳಕೆಯ ಭಾಷೆ ಆಗಬೇಕು ಎಂದರು. ನಾಡಿನ ಖ್ಯಾತ ಕವಿಗಳಾದ ಕುವೆಂಪು ಕನ್ನಡಕ್ಕೆ ಒಲಿದ ಬಗೆಯನ್ನು ವಿವರಿಸಿದರು. ಹಾಗೆ ನಮ್ಮ ದಿನ ನಿತ್ಯದ ಬದುಕಿನಲ್ಲಿ ಕನ್ನಡ ಬಳಸಿದರೆ ಮಾತ್ರ ಕನ್ನಡ ಉಳಿಯುತ್ತದೆ ಎಂಬ ಕಿವಿ ಮಾತನ್ನು ಹೇಳಿದರು. ಅವರ ತಿಮ್ಮನ ಕುರಿತು ಹೇಳಿದ ಕಥೆಗಳು ಪ್ರೇಕ್ಷಕರಲ್ಲಿ ಹಾಸ್ಯ ಪ್ರಜ್ಞೆಯನ್ನು ಮೂಡಿಸಿತು. ನಂತರ ವಿಭಾಗದಲ್ಲಿ ನಡೆಸಿದ ಭಾಷಣ ಸ್ಪರ್ಧೆ, ನಾಟಕ, ಸೃಜನಾತ್ಮಕ ಬರಹ, ಗಾಯನ, ರಸಪ್ರಶ್ನೆ ಮುಂತಾದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದನ್ನು ಉಪನ್ಯಾಸಕರಾದ ಶ್ರೀ ಚಂದ್ರಶೇಖರ್ ಅವರು ನಡೆಸಿ ಕೊಟ್ಟರು. ಅಂತಿಮವಾಗಿ ಕಾರ್ಯಕ್ರಮದ ವಂದನಾರ್ಪಣೆಯನ್ನು ವಿದ್ಯಾರ್ಥಿನಿ ಸುಜಿತಾ ಸ್ಟಾನ್ಲಿ ಅವರು ನಡೆಸಿಕೊಟ್ಟರು. ಇದರ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಂಜೆ ೫.೦೦ ಗಂಟೆಗೆ ಕಾರ್ಯಕ್ರಮ ಯಶಸಿಯಾಗಿ ಮುಗಿಯಿತು.

**Outcome:** ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಅಭಿವ್ಯಕ್ತಿ ಕ್ರಮ ಜಾಗೃತಗೊಳಿಸುವುದು ಮತ್ತು ಅವರಲ್ಲಿ ಸಾಹಿತ್ಯದ ಅಭಿರುಚಿ ಮೂಡಿಸುವುದು. ಸಾಂಸ್ಕೃತಿಕ ವೈವಿಧ್ಯತೆಯ ವಿವಿಧ ಸ್ಪರ್ಧೆಗಳ ಮೂಲಕ ಸಾಹಿತ್ಯದ ಕಲಿಕೆಗೆ ಪ್ರೋತ್ಸಾಹ ನೀಡುವುದು.

**Feedback:** ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದು. ನಾಡಿನ ಸಂಸ್ಕೃತಿಯ ಅರಿವು ಮೂಡಿಸುವುದು. ಸಾಹಿತ್ಯದ ಗಣ್ಯವ್ಯಕ್ತಿಗಳ ಮೂಲಕ ನಾಡು ನಉಡಿಗಳ ಪರಿಚಯ ಮಾಡಿಕೊಳ್ಳುವುದು.

ವರದಿತಯಾರಕರು

ನಾರಾಯಣಸ್ವಾಮಿ ಎಂ




Freeze


ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ
Freeze
ಕ್ರಿಸ್ತು ಜಯಂತಿ ಕಾಲೇಜು (ಸ್ವಾಯತ್ತ)
ಕೆ. ನಾರಾಯಣಪುರ, ಬೆಂಗಳೂರು ೭೭
ಕನ್ನಡ ವಿಭಾಗ